ಸೃಜನಿ

**SRUJANI: Indian Journal of Innovative Research and Development (SIJIRD)**
Volume-2 Issue 4, September-October 2023, Pp. 90-93
Bi-Monthly, Peer-Reviewed, Open Access, Indexed Journal

**I S S N: 2583-3510**

**SIRDF**
**JOURNALS**
editor@srujani.in
www.srujani.in

# ವೇಮನ ಸಾಹಿತ್ಯ: ಯುದ್ಧ ಮತ್ತು ಶಾಂತಿ

**ಡಾ. ಜಾಜಿ ದೇವೇಂದ್ರಪ್ಪ**

ಮುಖ್ಯಸ್ಥರು, ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಗಾವತಿ

***Abstract:***

*ವೇಮನನು 1652 ರಲ್ಲಿ ಮೂಗಚಿಂತ ಪಲ್ಲೆ ಎಂಬ ಗ್ರಾಮದ ಶ್ರೀಮಂತ ಕುಟುಂಬದಲ್ಲಿ ಜನಿಸಿ ಕೊಂಡವೀಡುವಿನಲ್ಲಿ ತಮ್ಮ ಬಾಲ್ಯವನ್ನು ಕಳೆದರು. ಬಾಲ್ಯದಿಂದಲೂ ಸುಖದಲ್ಲಿ ಬೆಳೆದ ವೇಮನ ಕೊನೆಗಾಲದಲ್ಲಿ ಬೈರಾಗಿಯಾಗಿ ಅಲೆದಾಡುವವರೆಗಿನ ಪ್ರಯಾಣ ಒಂದು ಪ್ರೇರಣಾದಾಯಿ ಇತಿಹಾಸವಾಗಿದೆ. ಮನುಷ್ಯ ಬದುಕಿನ ನೆಮ್ಮದಿಗಾಗಿ ಹಾತೊರೆಯುತ್ತಿದ್ದಾನೆ. ಈ ಭೂಮಿಯ ಮೇಲೆ ಮನುಷ್ಯ ಪ್ರಾಣಿಯು ಕರುಣೆಯ ಮನುಷ್ಯತ್ವವನ್ನು ನಾಗರಿಕ ವಿಕಾಸದ ಹಂತದಲ್ಲಿ ಕಟ್ಟಿಕೊಂಡಿದ್ದು ಇತಿಹಾಸ. ನಮ್ಮ ಭೂಗೋಳದಲ್ಲಿ ಸಂಸ್ಕೃತಿಗಳನ್ನು ಕಟ್ಟಿಕೊಂಡು ಬಾಳಿದ ಸಾವಿರಾರು ಸಮುದಾಯಗಳು ತಮ್ಮ ಸಂಸ್ಕೃತಿಗೆ ಧರ್ಮದ ಲೇಬಲ್ಲುಗಳನ್ನು ಅಂಟಿಸಿಕೊಂಡು ಭಿನ್ನ ಆಚರಣಾ ನೆಲೆಯಲ್ಲಿ ಬದುಕಲಾರಂಭಿಸಿವೆ. ವೇಮನ ಸಾಹಿತ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಯುದ್ಧ ಎಂಬುದು ಕೇವಲ ಖಡ್ಗ–ಬಂದೂಕು ಮೂಲವಾದದ್ದು ಅಲ್ಲ. ಈ ಯುದ್ಧ ಮನುಷ್ಯ ಕುಲದ ವಿವಿಧ ಆಯಾಮಗಳಲ್ಲಿ ನಡೆದಿದೆ. ಇದರ ಆಳ–ಅಗಲಗಳು ಕವಿಯ ಅಂತರಂಗವನ್ನು ತಲ್ಲಣಗೊಳಿಸಿವೆ.*

***Keywords:*** *ಕನ್ನಡ ಸಾಹಿತ್ಯ, ವೇಮನ, ಯುದ್ಧ ಮತ್ತು ಶಾಂತಿ, ಸಾಂಸ್ಕೃತಿಕ ವಿಭಿನ್ನತೆ.*

## ಪೀಠಿಕೆ

ಭೂಗೋಳದಲ್ಲಿ ಸಂಸ್ಕೃತಿಗಳನ್ನು ಕಟ್ಟಿಕೊಂಡು ಬಾಳಿದ ಸಾವಿರಾರು ಸಮುದಾಯಗಳು ತಮ್ಮ ಸಂಸ್ಕೃತಿಗೆ ಧರ್ಮದ ಲೇಬಲ್ಲುಗಳನ್ನು ಅಂಟಿಸಿಕೊಂಡು ಭಿನ್ನ ಆಚರಣಾ ನೆಲೆಯಲ್ಲಿ ಬದುಕಲಾರಂಭಿಸಿವೆ. ಭಿನ್ನತೆಯು ಕೇವಲ ಆಚಾರ–ಜೀವನಕ್ರಮಕ್ಕೆ ಸೀಮಿತವಾಗಿದ್ದರೆ ಅಪಾಯವೇನೂ ಇರಲಿಲ್ಲ. ಆದರೆ ಮನುಷ್ಯ ತನ್ನ ಆಚರಣೆ, ಜೀವನ ವಿಧಾನ, ತಾನು ನಂಬಿದ ದೈವೀಕತೆಯ ಚಹರೆಗಳನ್ನೂ ಮತ್ತೊಬ್ಬರ ಮೇಲೆ ಹೇರುವ ದುಸ್ಸಾಹಸಕ್ಕೆ ಮುಂದಾಗಿದ್ದುದರಿಂದಲೇ ಪ್ರಪಂಚದ ಬೇರೆ ಬೇರೆ ಭಾಗದ ಜನಾಂಗಗಳು ಮತ್ತೊಂದೆಡೆ ವಲಸೆ ಬಂದು ತಮ್ಮ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಬೀಜಗಳನ್ನು ಊರಿದರು. ಮಾತ್ರವಲ್ಲ ಈ ಹೇರುವ ಸಮಾಜೋ–ರಾಜಕೀಯ ಸಂಗತಿಯು ಒಪ್ಪಿತವಾಗಿ ಯಾವ ಜನಾಂಗವೂ ಸ್ವೀಕರಿಸಲಿಲ್ಲ. ಈ ಸಂದರ್ಭದಲ್ಲಿಯೇ ಬಲತ್ಕಾರ ಆರಂಭವಾಯಿತು. ಇದರ ಪರಿಣಾಮ ಯುದ್ಧ. ಯುದ್ಧವೆಂದರೆ ಅಪಾರ ಹಿಂಸೆ. ಈ ಹಿಂಸೆಯು ಗೆಲುವವರಿಗೆ ವಿಜಯವಾಗಿಯೂ ವಿಜಯೋತ್ಸವದ ಸಂಭ್ರಮಾಚರಣೆಯಾಗಿಯೂ ಕಾಣಬರುತ್ತದೆ. ಸೋತವರಿಗೆ ಇದು ಸ್ಮಶಾಣ ರೌದ್ರ ಭೀಭತ್ಸಮಯ ವಾತಾವರಣ ಸೃಷ್ಟಿ ಮಾಡುತ್ತದೆ. ಅಂದರೆ ಯುದ್ಧ ಒಂದೇ ಆದರೆ ಪರಿಣಾಮ ಧನಾತ್ಮಕ ಹಾಗೂ ಋಣಾತ್ಮಕವಾಗಿ ಕಾಣುವುದೇ ಪ್ರಪಂಚದ ವೈರುಧ್ಯ.

***Please cite this article as:*** *ಜಾಜಿ ದೇವೇಂದ್ರಪ್ಪ.* (2023). ವೇಮನ ಸಾಹಿತ್ಯ: ಯುದ್ಧ ಮತ್ತು ಶಾಂತಿ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 2(4), 90–93.

ಯುದ್ಧಗಳು ಘಟಿಸುವುದು ಮನುಷ್ಯನ ದುರಾಸೆಯ ಕಾರಣದಿಂದಲೇ. ಜಗತ್ತಿನಾದ್ಯಂತ ಯುದ್ಧಗಳಿಂದಾಗಿ ಅಪಾರ ಮಾನವನ ಜೀವಹಾನಿಯಾಗುತ್ತದೆ. ಈ ವಿಕಾರರೂಪ ಸಾವನ್ನು ಪ್ರಭುತ್ವಗಳು ಅಥವಾ ಗೆದ್ದ ರಾಜರು, ದೇಶಗಳು ಸಂಭ್ರಮಿಸುತ್ತವೆ. ಆದರೆ ಮನುಷ್ಯ ಪ್ರೇಮವುಳ್ಳ ಯಾರೂ ಇದನ್ನು ಒಪ್ಪುವುದಿಲ್ಲ. ಆದ್ದರಿಂದ ಯುದ್ಧದ ಹಿಂಸೆಗಳನ್ನು ಕಂಡ ಜಗತ್ತಿನ ಎಲ್ಲಾ ತತ್ವಸಿದ್ಧಾಂತಿಕರು, ಲೇಖಕರು, ಶರಣರು, ಸಂತರು, ಖಡಾಖಂಡಿತವಾಗಿ ಹಿಂಸೆಯನ್ನು ನಿರಾಕರಿಸುತ್ತಾರೆ. ಇಂದು ರಷ್ಯಾ ಮತ್ತು ಉಕ್ರೇನಿನ ಯುದ್ಧದ ಹಿಂಸಾತ್ಮಕ ಪರಿಣಾಮಗಳಿಂದ ಮುಗ್ಧ ಸಮುದಾಯಗಳು ಹೆಣಗಳಾಗಿ ಬೀದಿಯಲ್ಲಿ ಬಿದ್ದಿವೆ. ಇಂಥ ಸಂದರ್ಭದಲ್ಲಿ ಮರು ಅವಲೋಕನದ ನೆಲೆಯಲ್ಲಿ ನಮ್ಮ ಭಾರತೀಯ ಸಂತರಲ್ಲಿ ಮುಖ್ಯನಾದ ಕವಿ ವೇಮನರ ಉತ್ತರ ಏನೆಂಬುದನ್ನು ನೋಡಬಹುದು.

ಕವಿ ವೇಮನ ಮೂಲತಃ ಶಾಂತಿ, ನೆಮ್ಮದಿ ಬೋಧಿಸಿದ ಭಾರತೀಯ ಸಂತರಲ್ಲಿ ಮುಖ್ಯವಾದವನು. ಇಡೀ ತನ್ನ ವಚನಗಳಲ್ಲಿ ಸಂದರ್ಭ ದೊರೆತಾಗಲೆಲ್ಲ ಶಾಂತಿಯನ್ನು ಸಾರಿದ್ದಾನೆ. ಅದರಲ್ಲಿಯೂ ದಕ್ಷಿಣ ಭಾರತದಲ್ಲಿ ವೇಮನ ಬದುಕಿದ್ದ ಕಾಲದಲ್ಲಿ ಅನೇಕ ಯುದ್ಧಗಳು ಘೋರವಾಗಿ ನಡೆದಿವೆ. ಅವುಗಳ ಅರಿವು ವೇಮನನಿಗಿದೆ. ವೇಮನ ಸಾಹಿತ್ಯವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಯುದ್ಧ ಎಂಬುದು ಕೇವಲ ಖಡ್ಗ–ಬಂದೂಕು ಮೂಲವಾದದ್ದು ಅಲ್ಲ. ಈ ಯುದ್ಧ ಮನುಷ್ಯ ಕುಲದ ವಿವಿಧ ಆಯಾಮಗಳಲ್ಲಿ ನಡೆದಿದೆ. ಇದರ ಆಳ–ಅಗಲಗಳು ಕವಿಯ ಅಂತರಂಗವನ್ನು ತಲ್ಲಣಗೊಳಿಸಿವೆ. ವೇಮನನ ಜೀವಿತ ಕಾಲಾವಧಿಯಲ್ಲಿ ಭಾರತೀಯ ಪರಿಸರ ತುಂಬ ಕ್ಷೋಭೆಯಿಂದ ಕೂಡಿತ್ತು. ಅಷ್ಟೊತ್ತಿಗಾಗಲೇ ಅನೇಕ ದೇಶಗಳ ಜನರು ವಲಸೆ ಬಂದಿದ್ದರು. ವಲಸೆ ಬರುವಾಗ ಅವರವರ ಧರ್ಮ–ಮತಗಳನ್ನು ಇಲ್ಲಿಗೆ ತಂದು ಸ್ಥಳೀಯ ಮೂಲ ನಿವಾಸಿಗಳ ಮೇಲೆ ಹೇರಿದರು. ಈ ಸಂದರ್ಭಗಳಲ್ಲಾದ ಹಲವು ಬಗೆಯ ದುಷ್ಪರಿಣಾಮಗಳೂ ಯುದ್ಧಗಳೇ ಆಗಿದ್ದವು.

- ಧರ್ಮಯುದ್ಧಗಳು
- ಭೂ ವಿಸ್ತರಣಾ ಯುದ್ಧಗಳು
- ಮತಾಂತರದ ಯುದ್ಧಗಳು
- ಆರ್ಥಿಕ ಯುದ್ಧಗಳು
- ರಾಜಕಾರಣದ ಯುದ್ಧಗಳು

ಇವೆಲ್ಲಾ ಆಯಾ ಕಾಲಕ್ಕೆ ನಡೆಯುತ್ತಲೇ ಬಂದಿವೆ. ಈಗಲೂ ನಮ್ಮ ಮುಂದೆ ವಾಸ್ತವವಾಗಿ ನಡೆಯುತ್ತಲೇ ಇವೆ. ಈ ಹಲವು ಬಗೆಯ ಯುದ್ಧಾಘಾತಕ್ಕೆ ಮುಲಾಮು ನೀಡಲು ಇಡೀ ಜಗತ್ತಲ್ಲಿ ಅನೇಕ ಸಂತರು ಪ್ರಯತ್ನಿಸಿದ್ದಾರೆ. ಅವರಲ್ಲಿ ವೇಮನನೂ ತನ್ನ ನಿಲುವುಗಳನ್ನು ಪ್ರಕಟಿಸಿದ್ದಾನೆ.

***ಯುದ್ಧ ಮಾಡುವವನು ತಾ ಬುದ್ಧಿಹೀನನು***
***ಹದ್ದಿನಂತೆ ಜನರ ಹಸಿಮಾಂಸ ಮೆಲ್ಲುವವನು***
***ಯುದ್ಧಕ್ಕಿಂತ ತಾ ಬುದ್ಧಿಯಿಂದುರುವುದು ಕಾಣ***
***ವಿಶ್ವದಾಭಿರಾಮ ಕೇಳುವೇಮ.***

ಯುದ್ಧ ಒಂದು ಭಯಾನಕ ಮನೋರೋಗ. ಜನರ ಪ್ರಾಣವನ್ನು ಹದ್ದಿನಂತೆ ತಿನ್ನುವ ವಿಕಾರ ನಡೆ. ಬುದ್ಧಿವಂತನಾದವನು ಯುದ್ಧ ನಿರಾಕರಿಸುತ್ತಾನೆ. ಸಹಬಾಳ್ವೆಯ ಮಂತ್ರವನ್ನು ಜಪಿಸುತ್ತಾನೆ ಎಂಬ ಮಾತನ್ನು ಆ ಕಾಲದಲ್ಲಿಯೇ ಕವಿ ನುಡಿದಿರುವುದು ವಿಶೇಷ. ರಷ್ಯಾ ಮತ್ತು ಉಕ್ರೇನಿನ ಯುದ್ಧ ಪಿಪಾಸುತನಕ್ಕೆ ವೇಮನನ ಈ ಮಾತುಗಳು ಸಕಾಲಿಕ ಉತ್ತರಗಳು. ಯುದ್ಧ ಕೇವಲ ಹಿಂಸೆಯ ಸ್ವರೂಪದ್ದಲ್ಲ. ಮನದೊಳಗಣ ದುರ್ಗಣಗಳನ್ನೂ ಗೆಲ್ಲುವ ತಂತ್ರವೂ ಹೌದಲ್ಲವೆಯೆಂಬುದನ್ನು ವೇಮನ–

***ಕೊಲ್ಲಬಾರದು ಯಾವ ಪ್ರಾಣಿಗಳನ್ನು***
***ಕೊಲ್ಲಬೇಕು ಲೋಕದ ಶತ್ರುಗುಣವನ್ನೂ***
***ಚೇಳಿನಕೊಂಡಿ ಮುರಿದರೆ ಅದೇನು ಮಾಡುತ್ತದೆ***
***ವಿಶ್ವದಾಭಿರಾಮ ಕೇಳುವೇಮ.***

ಎಂದು ಹೇಳುವಲ್ಲಿ ಮಾನವೀಯ ಅಂತಃಕರಣದ ನೆಲೆಗಳಿವೆ. ಯಾವ ಪ್ರಾಣಿಗಳನ್ನು ಕೊಲ್ಲಬಾರದೆಂಬ ಆತನ ಆಶಯವೇ ಈ ಜಗದ ಒಳಿತಿನ ಆಗರವಾಗಿದೆ. ಹನ್ನೆರಡನೆ ಶತಮಾನದ ನಮ್ಮ ಶರಣರ ಆಶಯವೂ ಇದೇ ಆಗಿತ್ತು. ಕಳಬೇಡ, ಕೊಲಬೇಡ ಎಂಬ ಬೀಜಮಂತ್ರ ಈ ನೆಲದ ಪುಣ್ಯವೇ ಸರಿ. ಭೂಮಿ ಮೇಲಣ ಪ್ರಾಣಿಗಳನ್ನು ಕೊಲ್ಲುವ ಮೂಲಭೂತ ನೈತಿಕ ಹಕ್ಕು ವಾಸ್ತವವಾಗಿ ಯಾರಿಗೂ ಇಲ್ಲ. ವೇಮನ ಹೇಳುವ 'ಕೊಲ್ಲಬೇಕು ಲೋಕದ ಶತೃಗುಣವನ್ನೂ' ಎಂಬ ಮಾತು ಬಹುಮುಖ್ಯವಾದದ್ದು. ಇದು ಈ ಲೋಕದ ಮನುಷ್ಯ ಜೀವಿಯ ಒಳಗೆ ಅಡಗಿ ಕುಳಿತಿರುವ ಭಯಾನಕ ಗುಣ. ಅಂದರೆ ಅಂತರಂಗ ಶುದ್ಧಿಯಾಗಬೇಕು ಎಂಬುದೇ ಇದರ ಅರ್ಥ. ಜೀವನ ಕ್ರಮದಲ್ಲಿ ಯಾರೂ ಮೂಲತಃ ಕೆಟ್ಟವರಾಗಿರುವುದಿಲ್ಲ. ಕಾಲ, ಸಮಯಕ್ಕನುಸಾರಿಯಾಗಿ ಮಾನವ ದುರ್ಗುಣಗಳನ್ನು ಪಡೆಯುತ್ತಾನೆಂದು ಜೈನಧರ್ಮ ಹೇಳುತ್ತದೆ. ಅಂತೆಯೇ ವೇಮನ ಕೂಡ ಲೋಕದಲ್ಲಿರುವ ಶತೃಗುಣಗಳನ್ನೂ ಮಿತ್ರಗುಣಗಳ ಮುಖೇನ ಕೊಲ್ಲಬೇಕೆಂಬ ಉದಾತ್ತ ಮಾತುಗಳನ್ನು ಆಡುತ್ತಾನೆ. ಒಂದು ವೇಳೆ ದುಷ್ಟನಾಗಿದ್ದರೆ ಅವನನ್ನು ಕೊಲ್ಲಬಾರದು ಚೇಳಿನ ಕೊಂಡಿಗಳನ್ನು ಕತ್ತರಿಸಿದರೆ ಹೇಗೆ ಅದು ಸಹಜ ಸಾತ್ವಿಕ ಆಗುತ್ತದೆಯೋ ಹಾಗೆ ತಿದ್ದಬೇಕೆಂಬ ರೂಪಕ ತುಂಬ ಸೊಗಸಾಗಿದೆ. ವಿಷವನ್ನು ವರ್ಜನೆ ಮಾಡುವವರು ಯಾವತ್ತೂ, ನುಡಿಗೆ ತಪ್ಪುವುದಿಲ್ಲ. ತಪ್ಪಾದರೆ ಅವರು ಅಭಿಮಾನ ಹೀನರು, ಮೂಢಮತಿಗಳು, ಕ್ರೂರ ಬದುಕಿನ ದಾಹಿಗಳು. ಇಂಥವರನ್ನು ಖಡ್ಗದಿಂದಲೇ ವಾಸಿ ಮಾಡಬೇಕು ಎಂಬ ಮಾತನ್ನೂ ವೇಮನ ಹೇಳಿದ್ದು ವಿಶೇಷ.

ಯುದ್ಧ ಎಂದಿಗೂ ಬದುಕಿಗೆ ಉತ್ತರವೂ ಅಲ್ಲ ಉತ್ತರದಾಯಿಯೂ ಅಲ್ಲ. ಯುದ್ಧ ಖಡ್ಗದ ಮೊನೆಯಲ್ಲಡಗಿದ ಹಿಂಸೆಯ ಮೂಲಮನೆ. ಈ ಖಡ್ಗ ಹಿಡಿದವರು ಯಾರೂ ಭೂಮಿಯ ಮೇಲೆ ಶಾಶ್ವತವಾಗಿಲ್ಲ. ಆದರೆ ಖಡ್ಗವನ್ನು ನಿರಾಕರಿಸಿ ತತ್ವ, ಪ್ರೀತಿ, ಅಹಿಂಸೆಯನ್ನು ಅಪ್ಪಿಕೊಂಡ ಅಶೋಕನಂತಹ ಸಾಮ್ರಾಟರು ಮಾದರಿಯಾಗಿದ್ದಾರೆ. ಆದ್ದರಿಂದ ರಾಜನಾದವನು, ಇಲ್ಲವೇ ಆಡಳಿತ ನಡೆಸುವ ಪ್ರಭುತ್ವದ ಕಣ್ಣುಗಳು ಕರುಣೆಯಿಂದ ತುಂಬಿರಬೇಕು. ಅವರ ಹೃದಯಗಳು ಜನತೆಯ ಎದೆ ಬಾಗಿಲ ಪ್ರೀತಿಯನ್ನು ನೇವರಿಸಬೇಕು. ಆದ್ದರಿಂದಲೇ ವೇಮನ ಇಂಥವರು ಆಡಳಿತಗಾರರಾಗಬೇಕೆಂದು ಬಯಸುತ್ತಾನೆ

***ಮಾತನಾಡಬಹುದೇ ಮನಸು ತಿಳಿಯದಲೆ***
***ಅರಿತುಕೊಳ್ಳಬಹುದೇ ತತ್ವವಿಲ್ಲದಲೆ***
***ಖಡ್ಗ ಹಿಡಿಯಬಹುದೇ ಪ್ರೀತಿಯಿಲ್ಲದವರು***
***ವಿಶ್ವದಾಭಿರಾಮ ಕೇಳುವೇಮ.***

ಎಂಥ ಅದ್ಭುತವಾದ ಪ್ರೀತಿಯ ಮೀಮಾಂಸೆಯಿದು. ಇಂದು ಈ ತತ್ವ ಪಾಲಿಸಿದರೆ ಜನ ಸುಖ–ನೆಮ್ಮದಿಯಿಂದ ಬಾಳುತ್ತಾರೆ. ಜನತೆಯ ಬದುಕಿನ ಲಾಲಿತ್ಯ ರಾಜನಾದವನು ಅರಿಯಬೇಕು. ಆದರೆ ದುರಂತಕ್ಕೆ ಈ ಭೂಮಿಯ ಮೇಲೆ ಧರ್ಮ–ಧರ್ಮಗಳ ಕಲಹದಿಂದ ಮಾನವೀಯತೆಯನ್ನೂ ಮರೆತು ಜೀವನ ನರಕವಾಗುತ್ತಿದೆ. ರಾಜಕೀಯ ಮೇಲಾಟಕ್ಕಾಗಿ ಶಾಂತಿಯ ತೋಟದಂತಿದ್ದ, ಸರ್ವಸಮುದಾಯದ ಸುಂದರ ನೆಲವಾದ ಕನ್ನಡ ಮಣ್ಣಿನಲ್ಲಿಯೂ ಧಾರ್ಮಿಕ ಕಲಹಗಳಾಗುತ್ತಿರುವುದು ಚರಿತ್ರೆಯ ವ್ಯಂಗ್ಯವೇ ಸರಿ. "ಪ್ರೀತಿಯಿಲ್ಲದೇ ಖಡ್ಗ ಹಿಡಿಯಲೂಬಾರದು" ಎಂಬ ವೇಮನನ ತಾತ್ವಿಕ ಸಿದ್ಧಾಂತ ಯಾರು ಅರಿತುಕೊಳ್ಳುತ್ತಾರೆ. ಖಡ್ಗಕ್ಕೂ, ಪ್ರೀತಿಗೂ ವೈರುಧ್ಯ ಸಂಬಂಧವಿದೆಯಲ್ಲವೇ. ಇದೇ ಬದುಕಿನ ಧ್ಯಾನ, ಇದೇ ಅರಿತು ಬಾಳುವ ಜೀವನ ಪಯಣ. ಖಡ್ಗದ ಮೊನೆಯು ಕೈಯೊಳಗಿದ್ದೂ ಪ್ರೀತಿ ತುಂಬಿದ್ದರೆ ಅವನು ನಿಜಮಾನವ, ನಿಜ ಆಡಳಿತಗಾರನೆಂಬ ವೇಮನನ ಚಿಂತನಾಕ್ರಮ ಗಂಭೀರವಾಗಿ ಪರಿಗಣಿಸಬೇಕು. ಒಂದು ವೇಳೆ ಪ್ರೀತಿ, ಸಹನೆ, ತಾಳ್ಮೆಯಿಲ್ಲದವನು ಗದ್ದುಗೆಯೇರಿದರೆ ಅಲ್ಲಿ

ಖಂಡಿತ ಅವಿವೇಕತನದ ಧರ್ಮ ಕಲಹ, ಜಾತಿ ಕಲಹ, ವರ್ಣ ಕಲಹ, ಲಿಂಗಭೇದ ಕಲಹಗಳು ತಪ್ಪುವುದಿಲ್ಲ. ಇದನ್ನು ವೇಮನ–

***ಯುದ್ಧ ಮಾಡುವವನು ತಾ ಬುದ್ಧಿಹೀನನು***
***ಹದ್ದಿನಂತೆ ಜನರ ಹಸಿಮಾಂಸ ಮೆಲ್ಲುವವನು***
***ಯುದ್ಧಕ್ಕಿಂತ ತಾ ಬುದ್ಧಿಯಿಂದುರುವುದು ಕಾಣ***
***ವಿಶ್ವದಾಭಿರಾಮ ಕೇಳುವೇಮ.***

ಈ ಮಾತು ಇಂದಿಗೂ ಅರ್ಥಪೂರ್ಣ. ಜಗತ್ತಿನ ಬಲಾಢ್ಯ ದೇಶಗಳೆಲ್ಲ ಮಂಗನಂತೆ ಆಡುತ್ತಿರುವುದು ನಮ್ಮೆದುರಿಗಿದೆ. ಆರ್ಥಿಕ ಸಬಲತೆಯ ಕಾರಣದಿಂದ, ಧನಮದದಿಂದ ಮತ್ತೊಂದು ದೇಶದ ಮೇಲೆ ದುರಾಕ್ರಮಣ ಎಸಗುತ್ತಿರುವುದು ಅಮಾನವೀಯ ವಾದುದು. ಆರ್ಥಿಕ ಸಹಾಯ–ಸಹಕಾರದ ನೆಪದಲ್ಲಿ ಧರ್ಮಾಂಧ ದೇಶಗಳಿಗೆ ಕುಮ್ಮಕ್ಕೂ ನೀಡುತ್ತಲೇ ತಮ್ಮ ವಿಕೃತಾನಂದವನ್ನು ಇಮ್ಮಡಿಗೊಳಿಸಿಕೊಳ್ಳುತ್ತಿವೆ. ಪ್ರತಿಭಟಿಸುವ ಸತ್‌ಪ್ರಜೆಗಳನ್ನು ದೇಶದ್ರೋಹದ ನೆಪದಲ್ಲಿ ಜೈಲಿಗೆ ತಳ್ಳಲಾಗುತ್ತಿದೆ. ನ್ಯಾಯ ಮತ್ತು ಶಾಂತಿಯನ್ನು ಹೇಳಬೇಕಾದ ಪ್ರಪಂಚದ ನ್ಯಾಯಾಲಯಗಳು, ವಿಶ್ವಸಂಸ್ಥೆಗಳು ಮೌನ ತಾಳಿವೆ. ಅಭದ್ರತೆಯ ಕಡೆಗೆ ನೂಕಲಾಗುತ್ತಿದೆ. ಇಂತಹ ವಿಷಮ ಸಂದರ್ಭದಲ್ಲಿ ನಮಗೆ ಶಾಂತಿಯ ಮಂತ್ರ ಮುಖ್ಯ, ಯುದ್ಧದ ತಂತ್ರ ಅನಗತ್ಯ. ಇದಕ್ಕೆ ಮಹಾಕವಿ ವೇಮನನು ಬೋಧಿಸಿದ ಶಾಂತಿಯ ಜಪ ಎಂತಹ ಹಿಂಸೋತ್ಪಾದಕ ಯುದ್ಧವನ್ನೂ ನಿಲ್ಲಿಸುವಂತಹದ್ದು. ವೇಮನನ ಈ ಕೆಳಗಣ ಮಂತ್ರ ಜಗದ ಏಳಿಗೆಗೆ ದಿವ್ಯ ಔಷಧಿ–

***ಶಾಂತಿಯೇ ಜನರನ್ನು ಜಯದ ಕಡೆ ಒಯ್ಯುವುದು***
***ಶಾಂತಿಯಿಂದಲೇ ಗುರುವ ಮಾರ್ಗ ತಿಳಿಯುವುದು***
***ಶಾಂತಭಾವದ ಸಂವಾದದೊಳಗಾದವನೇ ದೇವ***
***ವಿಶ್ವದಾಭಿರಾಮ ಕೇಳುವೇಮ.***

ವೇಮನ ತನ್ನ ಸಾಹಿತ್ಯದಲ್ಲಿ ಯುದ್ಧ ಅನೇಕ ಕಾರಣಗಳಿಂದ ನಡೆದಿರಬಹುದು. ಆದರೆ ಯುದ್ಧ ಎಲ್ಲದಕ್ಕೂ ಪರಿಹಾರವಲ್ಲ. ಯುದ್ಧಕ್ಕಿಂತ ಶಾಂತಿ ಮುಖ್ಯ, ಶಾಂತಿ ಮಂತ್ರವೇ ಜನರನ್ನು ಜಯದ ಕಡೆಗೆ ಒಯ್ಯುವ ಮಾರ್ಗವಾಗಿದ್ದು, ವಿಶ್ವದ ನೆಮ್ಮದಿ ಶಾಂತಿಯಲ್ಲಡಗಿದೆ ಎಂಬುದನ್ನು ಹೇಳಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ನೆಡುನೂರಿ ಗಂಗಾಧರಂ. (ಸಂ.) (1960). *ವೇಮನ ಪದ್ಯಮುಲು.* (ತೆಲುಗು). ಅಡ್ಡೆಪಲ್ಲಿ & ಕಂ. ಸರಸ್ವತಿ ಪವರ್ ಪ್ರೆಸ್.
- ಪಾಟೀಲ್, ಎಸ್.ಆರ್. (1993). *ಮಹಾಯೋಗಿ ವೇಮನ* ವೇಮನ ಗ್ರಂಥಮಾಲಾ,